# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 235 | Pages. 2 | Date: 27-08-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 235 - ಪುಟಗಳು : 2 | 27-08-2026 | ಗುರುವಾರ | Ph: 8762954248 | ದರ : ₹1


# ಮಹಿಳಾ ಅಧಿಕಾರಿಗೆ ಅಗೌರವ ತರವಲ್ಲ

## ಹೆಚ್.ಡಿ.ರೇವಣ್ಣ ನಡೆಗೆ ಸಚಿವ ಶಿವಲಿಂಗೇಗೌಡ ಆಕ್ಷೇಪ | ಗ್ರಾ.ಪಂ. ಮೀಸಲಾತಿ ಪಾರದರ್ಶಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗ್ರಾಮ ಪಂಚಾಯಿತಿ ಮೀಸಲಾತಿ ಕಾನೂನು ಪ್ರಕಾರವೇ ನಡೆದಿದ್ದು ಜಿಲ್ಲಾಧಿಕಾರಿ ವಿರುದ್ಧ ಹಗುರವಾಗಿ ಮಾತನಾಡುವುದು ಸರಿಯಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಆಕ್ರೋಶ ವ್ಯಕ್ತಪಡಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಹಶೀಲ್ದಾರ್ ಕಳುಹಿಸಿದ ಎಲ್ಲವನ್ನೂ ಜಿಲ್ಲಾಧಿಕಾರಿ ಒಪ್ಪಿಕೊಳ್ಳಬೇಕು ಎಂಬ ನಿಯಮವಿಲ್ಲ. ಜಿಲ್ಲಾಧಿಕಾರಿ ತಪ್ಪು ಮಾಡಿದ್ದರೆ ದಾಖಲೆ ಸಮೇತ ಆರೋಪ ಮಾಡಲಿ, ತನಿಖೆ ನಡೆಸಲಿ. ಆದರೆ ಏಕವಚನದಲ್ಲಿ ಮಾತನಾಡುವುದು ಹಾಗೂ ಅಧಿಕಾರಿಗಳ ಬಗ್ಗೆ ಅಗೌರವದಿಂದ ಮಾತನಾಡುವುದು ಸರಿಯಲ್ಲ ಎಂದು ಖಂಡಿಸಿದರು.

ಪರಿಶಿಷ್ಟ ಪಂಗಡ ಸಮುದಾಯದ ಡಿಸಿ ಅವರನ್ನು ಹೆದರಿಸಿ ರಾಜಕಾರಣ ಮಾಡಲು ಸಾಧ್ಯವಿಲ್ಲ. ಜಿಲ್ಲಾಡಳಿತವನ್ನೇ ದೋಷಪೂರಿತವಾಗಿ ನೋಡುವ ಮನೋಭಾವನೆ ಸರಿಯಲ್ಲ ಎಂದು ತಿರುಗೇಟು ನೀಡಿದರು. ಜಿಲ್ಲಾಧಿಕಾರಿಗೆ ಆತ್ಮಸ್ಥೈರ್ಯ ತುಂಬುವುದು ಉಸ್ತುವಾರಿ ಸಚಿವನಾಗಿ ನನ್ನ ಕರ್ತವ್ಯ. ನಾನು ಅವರ ಪರ ನಿಲ್ಲುತ್ತೇನೆ. ವೈಯಕ್ತಿಕವಾಗಿ ಆರೋಪ ಮಾಡುವುದು ಸರಿಯಲ್ಲ ಎಂದರು.

ಜಿಲ್ಲೆಯಲ್ಲಿ ಬಿಳಿಸುಳಿ ರೋಗದಿಂದ ಸುಮಾರು 70 ಸಾವಿರ ಹೆಕ್ಟೇರ್ ಪ್ರದೇಶದ ಮೆಕ್ಕೆಜೋಳ ನಾಶವಾಗಿದ್ದು, ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಪರಿಹಾರ ಒದಗಿಸುವ




ನಿಟ್ಟಿನಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳ ಗಮನ ಸೆಳೆಯಲಾಗುವುದು ಎಂದು ಶಿವಲಿಂಗೇಗೌಡ ಹೇಳಿದರು.

ಜಿಲ್ಲೆಯ ಬರ ಪರಿಸ್ಥಿತಿ ಹಾಗೂ ಬೆಳೆ ಹಾನಿ ಕುರಿತು ಅಧ್ಯಯನ ನಡೆಸಿ ಮುಖ್ಯಮಂತ್ರಿಗಳಿಗೆ ವರದಿ ಸಲ್ಲಿಸಲಾಗಿದೆ. ಕೇವಲ ಶೇ.38 ರಷ್ಟು ಬಿತ್ತನೆಯಾಗಿದ್ದರೂ, ಅದೂ ಬಿಳಿಸುಳಿ ರೋಗದಿಂದ ನಾಶವಾಗಿದೆ. ರೈತರ ಸಂಕಷ್ಟವನ್ನು ಸಿಎಂ ಗಮನಕ್ಕೆ ತರಲಾಗಿದೆ ಎಂದರು.

ಹಾನಿಯಾದ ಬೆಳೆಗೆ ಪರಿಹಾರ ನೀಡುವಂತೆ ಉಭಯ ಸರ್ಕಾರಗಳ ಗಮನ ಸೆಳೆಯಲು ವಿಧಾನಸಭೆ ಅಧಿವೇಶನದಲ್ಲಿ ಸಿದ್ಧರಾಗಿದ್ದೆವು. ಆದರೆ ಕಲಾಪ ಸರಿಯಾಗಿ ನಡೆಯದೆ, ಚರ್ಚಿಸಲು ಸಾಧ್ಯವಾಗಲಿಲ್ಲ ಎಂದು ವಿಷಾದಿಸಿದರು.

ಜಿಲ್ಲೆಗೆ ಸಂಬಂಧಿಸಿದ ಐಐಟಿ ಮಂಜೂರು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣ ಮೊದಲಾದ ಕಾಮಗಾರಿ ಕುಂಟುತ್ತಾ ಸಾಗುತ್ತಿದ್ದು, ಯೋಜನೆಗಳನ್ನು ಆದ್ಯತೆ ಮೇರೆಗೆ ಪೂರ್ಣ ಗೊಳಿಸುವಂತೆ ಸಿಎಂಗೆ ಮನವಿ ಮಾಡಲಾಗಿದೆ, ಇದಕ್ಕೆ ಉತ್ತಮ ಸ್ಪಂದನೆ ದೊರೆತಿದೆ ಎಂದರು.

### ಬೆಳೆ ವಿಮೆ ನೀಡದಿದ್ದರೆ ಸುಪ್ರೀಂ ಮೊರೆ

ರೈತರು ಸಂಕಷ್ಟಕ್ಕೆ ಸಿಲುಕಿದಾಗ ಕೇಂದ್ರ ಸರ್ಕಾರ ನೆರವಿಗೆ ಧಾವಿಸಬೇಕು. ರಾಜ್ಯದಿಂದ ಕೇಂದ್ರಕ್ಕೆ ತೆರಿಗೆ ಪಾವತಿಸುತ್ತಿಲ್ಲವೇ ಎಂದು ಪ್ರಶ್ನಿಸಿದ ಸಚಿವರು, ರೈತರಿಗೆ ಬೆಳೆ ವಿಮೆ ನೀಡದಿದ್ದರೆ ಸುಪ್ರೀಂ ಕೋರ್ಟ್ ಮೊರೆ ಹೋಗುವ ಎಚ್ಚರಿಕೆ ನೀಡಿದರು. ಬರ, ಬೆಳೆ ನಷ್ಟ ಹಾಗೂ ಬಿಳಿಸುಳಿ ರೋಗ ಹಿನ್ನೆಲೆ ಪರಿಹಾರ ನೀಡಲು ದೊಡ್ಡ ಮೊತ್ತದ ಹಣ ಅಗತ್ಯವಿದೆ ಎಂದರು. ನಾನು ಮಂತ್ರಿಯಾದಾಗಲೇ ಬರಗಾಲ ಬಂದಿದೆ. ನಮ್ಮ ನೀರನ್ನು ತಮಿಳುನಾಡಿನವರು ಕಿತ್ತುಕೊಳ್ಳುತ್ತಿದ್ದಾರೆ ಎಂದು ಸಚಿವರು ಅಸಮಾಧಾನ ವ್ಯಕ್ತಪಡಿಸಿದರು.

ಸಚಿವ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ನಡೆಸುತ್ತಿರುವ ಪಾದಯಾತ್ರೆ ಕುರಿತು ಪ್ರತಿಕ್ರಿಯಿಸಿದ ಕೆಎಂಶಿ, ಆರೋಪ ಬಂದ ಮಾತ್ರಕ್ಕೆ ಯಾರನ್ನೂ ಅಪರಾಧಿ ಎಂದು ಪರಿಗಣಿಸಲು ಸಾಧ್ಯವಿಲ್ಲ. ತನಿಖಾ ಸಂಸ್ಥೆ ತಪ್ಪಿತಸ್ಥ ಎಂದು ವರದಿ ನೀಡಬೇಕಲ್ಲವೇ ಎಂದು ಪ್ರಶ್ನಿಸಿದರು.

ಇಡಿ, ಸಿಬಿಐ ತನಿಖೆ ನಡೆಸಿ, ತಪ್ಪಿತಸ್ಥರಾಗಿದ್ದರೆ ಕ್ರಮ ಕೈಗೊಳ್ಳಲಿ. ಬಿಜೆಪಿಯವರು ಪಾದಯಾತ್ರೆ ಮಾಡಲಿ ತಪ್ಪೇನಿಲ್ಲ, ಜನರು ಬುದ್ಧಿವಂತರಾಗಿದ್ದು, ಸತ್ಯಾಸತ್ಯತೆ ನಿರ್ಧರಿಸುತ್ತಾರೆ ಎಂದರು.

ನಿಯಮ ಮೀರಿ ಮದ್ಯದಂಗಡಿ ತೆರೆದರೆ ಲೈಸೆನ್ಸ್ ರದ್ದು ಮಾಡುವುದಾಗಿ ಇದೇ ವೇಳೆ ಎಚ್ಚರಿಕೆ ನೀಡಿದರು. ಗೋವಾದಿಂದ ತೆರಿಗೆ ಪಾವತಿಸದ ಮದ್ಯ ತಂದು ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿ ಬಂದಿದೆ. ಇದನ್ನು ತಡೆಗಟ್ಟಲು ಕಠಿಣ ಕ್ರಮ ಕೈಗೊಳ್ಳಲಾಗುವುದು. ನಿಗದಿತ ಸ್ಥಳ ಹೊರತುಪಡಿಸಿ ಕಾನೂನು ಮೀರಿ ಮದ್ಯದಂಗಡಿ ತೆರೆದರೆ ಲೈಸೆನ್ಸ್ ರದ್ದುಪಡಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

> ಇಷ್ಟು ದಿನ ಅಬಕಾರಿ ಇಲಾಖೆ ಹೇಗೆ ನಡೆಯುತ್ತಿತ್ತು ಎಂಬುದು ಗೊತ್ತಿಲ್ಲ. ಆದರೆ ನನ್ನ ಅವಧಿಯಲ್ಲಿ ಹಿಂದಿನ ರೀತಿಯಲ್ಲಿ ನಡೆಯಲು ಅವಕಾಶ ನೀಡಲ್ಲ. ಕಾನೂನು ಉಲ್ಲಂಘಿಸಿದರೆ ಕ್ರಮ ಖಚಿತ.
>
> **- ಕೆ.ಎಂ.ಶಿವಲಿಂಗೇಗೌಡ, ಜಿಲ್ಲಾ ಉಸ್ತುವಾರಿ ಸಚಿವ**

# ಅರ್ಥಪೂರ್ಣ ಈದ್ ಮಿಲಾದ್ ಆಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪ್ರವಾದಿ ಮುಹಮ್ಮದ್ (ಸ.ಅ) ಅವರ ಜನ್ಮದಿನವಾದ ಮೀಲಾದುನ್ನಬಿಯನ್ನು ಪ್ರೀತಿ, ಶಾಂತಿ, ಸೌಹಾರ್ದತೆ ಹಾಗೂ ಮಾನವೀಯ ಮೌಲ್ಯ ಸಾರುವ ದಿನವನ್ನಾಗಿ ಆಚರಿಸಬೇಕು ಎಂದು ಮೌಲಾನಾ ಕಲೀಮುದ್ದೀನ್ ಕರೆ ನೀಡಿದರು.

ಕ್ವಾಜಾ ವೆಲ್‌ಫೇರ್ ಟ್ರಸ್ಟ್ ಹಾಗೂ ಮದರಸದ ವಿದ್ಯಾರ್ಥಿಗಳ ವತಿಯಿಂದ ಮೀಲಾದುನ್ನಬಿ ಅಂಗವಾಗಿ ಮುಂಜಾನೆ ಲೋಕ ಕಲ್ಯಾಣಕ್ಕಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ಹೊಸ ಬಟ್ಟೆ ತೊಟ್ಟು, ಸಿಹಿ ಹಂಚಿ, ರಾಷ್ಟ್ರಧ್ವಜ ಹಿಡಿದು ಮೆರವಣಿಗೆಯಲ್ಲಿ ಸಾಗಿದ ದೃಶ್ಯ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮೌಲಾನಾ ಕಲೀಮುದ್ದೀನ್, ಪ್ರವಾದಿ ಮುಹಮ್ಮದ್ (ಸ.ಅ) ಅವರ ಬದುಕಿನ ಕರುಣೆ, ಸಂಯಮ, ಶಿಸ್ತು, ನೆರೆಯವರ ಹಕ್ಕಿನ ಗೌರವ, ದುರ್ಬಲರ ಕಾಳಜಿ ಹಾಗೂ ಸಮಾಜಕ್ಕೆ ಒಳಿತು ಮಾಡುವ ಮನೋಭಾವವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ಪ್ರವಾದಿ (ಸ.ಅ) ಅವರನ್ನು ಗೌರವಿಸುವ ಅತ್ಯುತ್ತಮ ಮಾರ್ಗವೆಂದರೆ ಅವರ ಮೌಲ್ಯಗಳನ್ನು ನಮ್ಮ ನಡವಳಿಕೆಯಲ್ಲಿ ಪಾಲಿಸುವುದಾಗಿದೆ ಎಂದು ಹೇಳಿದರು.

ಮೀಲಾದುನ್ನಬಿ ಆಚರಣೆ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಯಾವುದೇ ತೊಂದರೆಯಾಗದಂತೆ ಹಾಗೂ ರಸ್ತೆಯಲ್ಲಿ ಸಂಚರಿಸು ವವರಿಗೆ ಅಡಚಣೆಯಾಗದಂತೆ ಎಚ್ಚರಿಕೆ ವಹಿಸಲಾಗಿತ್ತು.




ಪೊಲೀಸ್ ಇಲಾಖೆ ನೀಡಿರುವ ಮಾರ್ಗಸೂಚಿಗಳನ್ನು ಪಾಲಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದರ ಜೊತೆಗೆ ವಿದ್ಯಾರ್ಥಿಗಳ ಓದಿಗೆ ಹಾಗೂ ವೃದ್ಧರ ವಿಶ್ರಾಂತಿಗೆ ಭಂಗವಾಗದಂತೆ ಶಾಂತಿ ಮತ್ತು ಸೌಹಾರ್ದತೆಯಿಂದ ಹಬ್ಬ ಆಚರಿಸುತ್ತಿದ್ದೇವೆ ಎಂದು ತಿಳಿಸಿದರು.

24★7 ಮುಖ್ಯಸ್ಥ ನೂರ್ ಅಹ್ಮದ್ ಮಾತನಾಡಿ, ಪ್ರವಾದಿ ಮುಹಮ್ಮದ್ (ಸ.ಅ) ಅವರ ಜೀವನ ಸಂದೇಶ ಹಾಗೂ ಮಾನವೀಯ ಮೌಲ್ಯಗಳನ್ನು ಜನರಿಗೆ ಪರಿಚಯಿಸುವ ಮೂಲಕ ಪ್ರೀತಿ, ಸಾಮರಸ್ಯ ಮತ್ತು ಭ್ರಾತೃತ್ವದ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು. ನೆಮ್ಮದಿಯ ನಾಡು, ಸೌಹಾರ್ದಯುತ ಕರ್ನಾಟಕ ಹಾಗೂ ಬಲಿಷ್ಠ ದೇಶ ನಿರ್ಮಾಣ ನಮ್ಮ ಸಂಕಲ್ಪವಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕ್ವಾಜಾ ವೆಲ್‌ಫೇರ್ ಟ್ರಸ್ಟ್ ಅಧ್ಯಕ್ಷ ಮಸೂದ್ ಪಾಷ, ಕಾರ್ಯದರ್ಶಿ ಫಾಸಿಲ್ ಅಹ್ಮದ್, ಗೌರವಾಧ್ಯಕ್ಷ ಶಫಿಕ್ ಅಹ್ಮದ್, ತಬ್ರೆಸ್ ರಸವಿ, ಮುಸಿನ್, ಶಿಕ್ಷಕಿ ನಾಜಿಯಾ ಸುಲ್ತಾನ, ಶಾಜಿಯಾಬಾನು, ಹುಧಾ ಫಾತಿಮಾ ಹಾಗೂ ಮದರಸದ ಪುಟಾಣಿ ಮಕ್ಕಳು ಉಪಸ್ಥಿತರಿದ್ದರು.

## ಕುಡಿಯುವ ನೀರಿಗಾಗಿ ಮೂಗಲಿ ಗ್ರಾಮಸ್ಥರ ಪ್ರತಿಭಟನೆ



ಸಕಲೇಶಪುರ: ತಾಲೂಕಿನ ಬೆಳಗೋಡು ಹೋಬಳಿ ಮೂಗಲಿ ಗ್ರಾಮದಲ್ಲಿ ಕಳೆದ 15-20 ದಿನಗಳಿಂದ ಸಮರ್ಪಕ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ ಎಂದು ಆರೋಪಿಸಿ ಗ್ರಾಮಸ್ಥರು ಮಂಗಳವಾರ ಪ್ರತಿಭಟನೆ ನಡೆಸಿದರು.

ಗ್ರಾಮದಲ್ಲಿ ಹಲವು ದಿನಗಳಿಂದ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಂಡಿದ್ದು, ನಿತ್ಯ ಬಳಕೆಗೂ ನೀರಿಲ್ಲದೆ ಪರದಾಡುವಂತಾಗಿದೆ. ಸಮಸ್ಯೆ ಕುರಿತು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ಪ್ರತಿಭಟನಾಕಾರರು ದೂರಿದರು.

ಕುಡಿಯುವ ನೀರಿನ ಸಮಸ್ಯೆ ಕುರಿತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಲಕ್ಷ್ಮೀ ನರಸಿಂಹ ಅವರಿಗೆ ಹಲವು ಬಾರಿ ಕರೆ ಮಾಡಿದರೂ ಸ್ಪಂದಿಸುತ್ತಿಲ್ಲ. ನೀರು ಪೂರೈಕೆಯ ಜವಾಬ್ದಾರಿ ಹೊತ್ತಿರುವ ನೀರುಗಂಟಿಯ ನಿರ್ಲಕ್ಷ್ಯದಿಂದ ಸಮಸ್ಯೆ ಮತ್ತಷ್ಟು ಉಲ್ಬಣಗೊಂಡಿದೆ ಎಂದು ಗ್ರಾಮದ ಮಹಿಳೆಯರು ಅಸಮಾಧಾನ ವ್ಯಕ್ತಪಡಿಸಿದರು.

ಗ್ರಾಮಕ್ಕೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸುವಂತೆ ಶಾಸಕರು ಹಾಗೂ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದರೂ ಅದನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂದು ಆರೋಪಿಸಿದ ಗ್ರಾಮಸ್ಥರು, ಪಿಡಿಒ ಕಾರ್ಯವೈಖರಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತಕ್ಷಣ ಶಾಶ್ವತ ಪರಿಹಾರಕ್ಕೆ ಒತ್ತಾಯ: ಕುಡಿಯುವ ನೀರು ಮೂಲಭೂತ ಅಗತ್ಯವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗ್ರಾಮಕ್ಕೆ ಸಮರ್ಪಕ ನೀರು ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಸಮಸ್ಯೆಗೆ ತಾತ್ಕಾಲಿಕ ಪರಿಹಾರದ ಬದಲು ಶಾಶ್ವತ ಪರಿಹಾರ ಕಲ್ಪಿಸಬೇಕು. ಕರ್ತವ್ಯ ನಿರ್ಲಕ್ಷ್ಯ ತೋರಿರುವ ಆರೋಪದ ಕುರಿತು ಪರಿಶೀಲಿಸಿ ಪಿಡಿಒ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

# ದಸರಾ ಗಜಪಯಣಕ್ಕೆ ಶುಭ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಮೈಸೂರು: ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ 2026ರ ದಸರಾ ಗಜಪಯಣಕ್ಕೆ ಚಾಲನೆ ದೊರೆತಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಇಂದು ಗಜಪಯಣಕ್ಕೆ ಚಾಲನೆ ನೀಡಿದರು.

ಹುಣಸೂರಿನ ವೀರನಹೊಸಳ್ಳಿಯಲ್ಲಿ ಗಜಪಯಣದ ಕಾರ್ಯಕ್ರಮ ಜರುಗಿತು. ಬೆಳಗ್ಗೆ 10 ರಿಂದ 10.28ರ ಶುಭ ತುಲಾ ಲಗ್ನದಲ್ಲಿ ಗಜಪಡೆಗೆ ಪೂಜೆ ಸಲ್ಲಿಸಿ, ಫಲತಾಂಬೂಲ ನೀಡಿ ಚಾಲನೆ ನೀಡಲಾಯಿತು. ಆನಂತರ ಗಜಪಡೆ



ಕಾಡಿನಿಂದ ನಾಡಿನತ್ತ ಹೆಜ್ಜೆ ಹಾಕಿದವು.

ಈ ಬಾರಿ ದಸರಾ ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಒಟ್ಟು 12 ಆನೆಗಳನ್ನು ಆಯ್ಕೆ ಮಾಡಲಾಗಿದೆ. ಮೊದಲ ಹಂತದಲ್ಲಿ ಧನಂಜಯ, ಪ್ರಶಾಂತ, ಗೋಪಿ, ಶ್ರೀರಾಮ, ಸುಗ್ರೀವ, ಕಾವೇರಿ, ಮಹೇಂದ್ರ, ಲಕ್ಷ್ಮೀ ಹಾಗೂ ಏಕಲವ್ಯ ಸೇರಿದಂತೆ 9 ಆನೆಗಳು ಮೈಸೂರಿನತ್ತ ಪ್ರಯಾಣ ಬೆಳೆಸಿದವು. ಉಳಿದ ಆನೆಗಳು ಎರಡನೇ ಹಂತದಲ್ಲಿ ಆಗಮಿಸಲಿವೆ.

ಗಜಪಯಣದ ಬಳಿಕ ಆನೆಗಳು ಮೈಸೂರಿಗೆ ಆಗಮಿಸಿ ತರಬೇತಿ ಪಡೆಯಲಿವೆ. ಆ.28 ರಂದು ಗಜಪಡೆ ಮೈಸೂರು ಅರಮನೆ ಆವರಣ ಪ್ರವೇಶಿಸಲಿದ್ದು, ಅಲ್ಲಿ ಅವುಗಳಿಗೆ ಸಾಂಪ್ರದಾಯಿಕ ಸ್ವಾಗತ ನೀಡಲಾಗುತ್ತದೆ.

ಅಂಬಾರಿ ಆನೆ ಯಾರು: ಈ ಬಾರಿಯ ದಸರಾ ಜಂಬೂಸವಾರಿಯಲ್ಲಿ ಪ್ರಮುಖ ಬದಲಾವಣೆಯಾಗಿದೆ. ಕಳೆದ ಆರು ವರ್ಷಗಳಿಂದ ಚಿನ್ನದ ಅಂಬಾರಿ ಹೊತ್ತಿದ್ದ 60 ವರ್ಷದ ಅಭಿಮನ್ಯು, ಈ ಬಾರಿ ದಸರಾ ಕರ್ತವ್ಯದಿಂದ ನಿವೃತ್ತಿಯಾಗಿದ್ದಾನೆ. ಹೀಗಾಗಿ ಧನಂಜಯ, ಪ್ರಶಾಂತ, ಸುಗ್ರೀವ ಹಾಗೂ ಮಹೇಂದ್ರ ಸೇರಿ ನಾಲ್ಕು ಆನೆಗಳನ್ನು ಅಂಬಾರಿ ಹೊರುವ ಜವಾಬ್ದಾರಿಗಾಗಿ ಪರಿಗಣಿಸಲಾಗಿದೆ. ಅಂತಿಮವಾಗಿ ಯಾರಿಗೆ ಚಿನ್ನದ ಅಂಬಾರಿ ಹೊರುವ ಜವಾಬ್ದಾರಿ ಸಿಗಲಿದೆ ಎಂಬುದು ಕುತೂಹಲ ಮೂಡಿಸಿದೆ.

# ಸತ್ಯಮಂಗಲ ಕೆರೆಗೆ ಐದು ದಿನದಲ್ಲಿ ನೀರು ಹರಿಸಿ

## 2 ದಿನದಲ್ಲಿ ಬಾಕಿ ಕಾಮಗಾರಿ ಮುಗಿಸಿ : ಇಂಜಿನಿಯರ್-ಗುತ್ತಿಗೆದಾರರಿಗೆ ಸಚಿವ ಕೆಎಂಶಿ ತಾಕೀತು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲೂಕಿನ ಹಂದಿನಕೆರೆ ಗ್ರಾಮದ ಸಮೀಪ ನಡೆಯುತ್ತಿರುವ ಏತ ನೀರಾವರಿ ಯೋಜನೆ ಕಾಮಗಾರಿಯನ್ನು ಸಚಿವ ಕೆ.ಎಂ. ಶಿವಲಿಂಗೇಗೌಡರ ಇಂದು ವೀಕ್ಷಣೆ ಮಾಡಿದರು.

ಕಾಮಗಾರಿ ವಿಳಂಬ ಆಗಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಎಷ್ಟು ದಿನದಲ್ಲಿ ಕಾಮಗಾರಿ ಮುಗಿಸ್ತಿಯಪ್ಪಾ ಎಂದು ಇಂಜಿನಿಯರ್‌ಗೆ ಪ್ರಶ್ನಿಸಿದರು. ಇದಕ್ಕೆ ಉಳಿದ ಕಾಮಗಾರಿ, ಟೆಸ್ಟ್ ಟ್ರಯಲ್ ಎಲ್ಲಾ ಮಾಡಬೇಕಾಗುತ್ತೆ ಸರ್ ಸ್ವಲ್ಪ ವಿಳಂಬ ಆಗಲಿದೆ ಎಂದು ಅಧಿಕಾರಿ ಹೇಳಿದರು.

ನನಗೆ ಟೆಸ್ಟು ಗಿಸ್ಟು ಅವ್ಯಾಮಾ, ಗೊತ್ತಿಲ್ಲ, ಎಷ್ಟು ದಿನದಲ್ಲಿ ಕೆರೆಗೆ ಹರಿಸ್ತಿಯಾ ಹೇಳು ಎಂದು ಕೇಳಿದರು.

ನಂತರ ಅದ್ಯಾರು ಕಂಟ್ರಾಕ್ಟರ್ ಕರೀರಿ ಎಂದ ಸಚಿವರು, ಇವೆಲ್ಲಾ ನನ್ನತ್ರ ನಡೆಯಲ್ಲ... ಟೈಂ ಬಾಂಡ್‌ನಲ್ಲಿ ಕೆಲಸ ಮುಗಿಸಬೇಕು. ಇಲ್ಲಿ ಎಲ್ಲಾ ಹೇಳಿ.. ನಾನು ಅತ್ಲಾಗೆ ಹೋಗ್ತಿದ್ದಂಗೆ.. ಇತ್ಲಾಗೆ ಹೋಗೋದಲ್ಲಾ ಎಂದು ವಾರ್ನಿಂಗ್ ಮಾಡಿದರು.

ಯಾವಾಗ ಮುಗಿಸ್ತೀರಾ ಜನರು ಎದುರು ಹೇಳಿ ಎಂಬ ಸಚಿವ ಪ್ರಶ್ನೆಗೆ ಮುಂದಿನ ಹತ್ತು ದಿನದಲ್ಲಿ ನೀರು ಹರಿಸ್ತೀವಿ ಎಂದು ಗುತ್ತಿಗೆದಾರರು ಉತ್ತರಿಸಿದರು.

ಹತ್ತು ದಿನ... ಯಾಕಪ್ಪಾ.. ಐದು ದಿನ ಟೈಂ ಕೊಡ್ತೇನೆ, ಉದ್ದ, ಅಗಲ ಎಲ್ಲಾ ನೋಡಿದ್ದೇನೆ.. ಐದು ದಿನದಲ್ಲಿ ಸತ್ಯಮಂಗಲ ಕೆರೆಗೆ ನೀರು ಹರಿಸಬೇಕು ಎಂದು ತಾಕೀತು ಮಾಡಿದರು.



ಇದೇ ವೇಳೆ ಕೇವಲ 42 ಮೀಟರ್ ಕಾಮಗಾರಿಗೆ 2 ಕಡೆಗಳಲ್ಲಿ ತಡೆಯೊಡ್ಡಿದ್ದ 2 ಕುಟುಂಬಗಳ ರೈತರೊಂದಿಗೆ ಸಚಿವರು ಮಾತುಕತೆ ನಡೆಸಿದರು. ನಂತರ ಬಾಕಿ ಕಾಮಗಾರಿಯನ್ನು ಮುಂದಿನ ಎರಡು ದಿನಗಳಲ್ಲಿ ಮುಗಿಸುವಂತೆ ಸಚಿವರು ಸೂಚಿಸಿದರು. ಈ ಯೋಜನೆ ಮುಗಿದರೆ ನಗರದ ಸತ್ಯಮಂಗಲ ಹಾಗೂ ಚನ್ನಪಟ್ಟಣ ಕೆರೆಗಳಿಗೆ ನೀರು ಹರಿಯಲಿದೆ.

ಈ ವೇಳೆ ಕ್ಯಾತನಹಳ್ಳಿ ಏತ ನೀರಾವರಿ ಕಾಮಗಾರಿಯನ್ನೂ ಆದಷ್ಟು ಬೇಗ ನಾನೇ ಖುದ್ದು ಭೇಟಿ ನೀಡಿ ಮುಗಿಸುವ ಭರವಸೆ ನೀಡಿದರು.

ಅಣ್ಣ-ತಮ್ಮ ಜಗಳ: ಇದೇ ವೇಳೆ ಸಚಿವರ ಎದುರೇ ಪರಿಹಾರ ಹಣದ ವಿಚಾರದಲ್ಲಿ ಅಣ್ಣ ತಮ್ಮ ಜಗಳ ಆಡಿಕೊಂಡರು. ಕಾಮಗಾರಿಗೆ ಹೋಗಿರುವ ಜಮೀನಿಗೆ ಬರುವ ಪರಿಹಾರವನ್ನು ನನಗೂ ಕೊಡಬೇಕು ಎಂದು ತಮ್ಮ ಕೇಳಿದ. ಜಮೀನು ಪಾಲು ನನ್ನ ಹೆಸರಿಗೆ ಬಂದಿರೋದು ನಾ ಕೊಡಲ್ಲ ಎಂದು ಅಣ್ಣ ವೆಂಕಣ್ಣ ಗೌಡ ಹೇಳಿದ. ಈ ದೃಶ್ಯ ನೋಡಿ ಒಂದು ಕ್ಷಣ ಸಚಿವರು ಸೈಲೆಂಟ್ ಆದರು. ಬಳಿಕ ಏಯ್...ನಿಮ್ ಜಮೀನು ವಿಷಯ, ನೀವು ಸರಿ ಮಾಡಿಕೊಳ್ಳಿ ಎಂದು ಗದರಿ ನಂತರ ಪೊಲೀಸರ ಕರೆಸಿ ಆಚೆಗೆ ಕಳಿಸಿದರು.

ಇದೇ ವೇಳೆ ಸ್ಥಳಿಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಇದ್ದರು.

### ಭೂ ಸ್ವಾಧೀನಾಧಿಕಾರಿಗೆ ಸಚಿವರ ಕ್ಲಾಸ್

ಇದೇ ವೇಳೆ ವಿಶೇಷ ಭೂ ಸ್ವಾಧೀನಾಧಿಕಾರಿ ಮಂಜುನಾಥ್‌ಗೆ ಕ್ಲಾಸ್ ತೆಗೆದುಕೊಂಡ ಸಚಿವರು, ಕೆಲಹೊತ್ತು ಪಾಠ ಹೇಳಿದರು. ಎಸ್‌ಎಲ್‌ಒ ಅವರು ಮೊದಲಿಗೆ ಮನಸ್ಸಿಗೆ ಬೇಜಾರ್ ಮಾಡಿದ್ರು, ಮೊದಲು ಲೈನ್‌ಗೆ ಬಂದಿರಲಿಲ್ಲ, ಆಮೇಲೆ ಲೈನ್‌ಗೆ ಬಂದ್ರು, ನನ್ನದು ಎರಡು-ಮೂರು ಲೈನ್ ಇಲ್ಲ, ಇರೋದು ಒಂದೇ ಲೈನ್. ಬಹಿರಂಗವಾಗಿ ನಿಮಗೆ ಹೇಳ್ತೀನಿ ಕೇಳಿ, ಒಂದೇ ಲೈನಲ್ಲಿ ಇರಬೇಕು ಎಂದು ಎಚ್ಚರಿಸಿದರು.

ಎರಡು-ಮೂರು ಲೈನ್ ಇಟ್ಕೊಂಡು ಟ್ವಿಸ್ಟ್ ಮಾಡಿದ್ರೆ ಅವು ನಡೆಯಲ್ಲ, ನನಗೆ ಅವು ಗೊತ್ತಿಲ್ಲ, ಕೆಲಸ ಆಗಬೇಕು, ರಾಜಕಾರಣದಲ್ಲಿ ನಾನು ಬಂದಿರೋದೇ ಹಾಗೆ,

ಹೋಗೋದು ಹಾಗೆ, ಏನೋ ಭಗವಂತ, ಜನರ ಆಶೀರ್ವಾದಿಂದ ಸಚಿವ ಆಗಿದ್ದೇನೆ. ಜಿಲ್ಲೆಯ ಜವಾಬ್ದಾರಿ ನನ್ನ ಕೈಗೆ ಬಂದಿದೆ ಎಂದರು. ಇಷ್ಟು ಸಣ್ಣ ಕೆಲಸಕ್ಕೆ ಫೋನ್‌ಗೀನಲ್ಲಿ ಹೇಳಿದ್ರೆ ಆಗಲ್ವಾ ಅನ್ಕೋಬಹುದು, ಅದು ಆಗಲ್ಲ, ನಾನು ಸಣ್ಣ ಕೆಲಸಕ್ಕೆ ಬರೋದು, ಅದು ಮಾಡಿದ್ರೆ ಅದೇ ದೊಡ್ಡ ಕೆಲಸ, ಈ ಸಣ್ಣ ಕೆಲಸ ಆದ್ರೂ, ಸಾಧನೆ ಮಾಡೋದಿದ್ಯಲ್ಲಾ ಅದು ದೊಡ್ಡ ಕೆಲಸ, ನಾನು ವಸಗೆ, ನಾಮಕರಣ ಎಲ್ಲದಕ್ಕೂ ಹೋಗುತ್ತೇನೆ, ನಾನು ರಾಜಕಾರಣ ಮಾಡಿರೋದೇ ಹೀಗೆ, ಸಣ್ಣಪುಟ್ಟ ಕಾರ್ಯಕ್ರಮಕ್ಕೆ ಹೋದ್ರೆ ಆಯೋಜಕರಿಗೆ ಆಗೋ ತೃಪ್ತಿ ದೇವಲೋಕಾನೇ ಇಳಿದು ಬಂದಂಗೆ ಆಗುತ್ತೆ, ಬೇಕಿಲ್ಲದವನ ಮನೆಗೆ ಹೋಗಿ ಬಂದ್ರೆ, ಬಂದ ಹೋದ ಅಂತಾನೆ, ಅಂತಹವನ ಮನೆಗೆ ನಾವ್ ಹೋಗಲ್ಲ ಎಂದು ತಮ್ಮ ಶೈಲಿಯನ್ನು ವಿವರಿಸಿ ಅಧಿಕಾರಿಗೆ ಪಾಠ ಮಾಡಿದರು.

### ಜಿಲ್ಲಾಧಿಕಾರಿಗೆ ಹೊಣೆ ನೀಡಿದ ಸಚಿವ

ಈ ನಡುವೆ ಪರಿಹಾರ ನೀಡದೆ ಕಾಮಗಾರಿಗೆ ಭೂಮಿ ನೀಡುವುದಿಲ್ಲ ಎಂದು ರೈತರು ಪಟ್ಟು ಹಿಡಿದರು. ಇದೇ ಕಾರಣಕ್ಕೆ ಕಳೆದ ಐದು ವರ್ಷದಿಂದ ಕಾಮಗಾರಿಗೆ ತಡೆಯಾಗಿದೆ. ಕಾಮಗಾರಿ ಮುಗಿಯಲು 32 ಗುಂಟೆ ಜಮೀನು ಅವಶ್ಯವಿದ್ದು, ಐವರು ರೈತರು ಭೂಮಿ ಕೊಡುತ್ತಿಲ್ಲ. ಇದನ್ನು ಗಮನಿಸಿದ ಸಚಿವರು, ರೈತರಿಗೆ ಬಾಕಿ ಇರುವ 39 ಲಕ್ಷ ಪರಿಹಾರ ನೀಡುತ್ತೇವೆ, ಸಂಜೆಯೊಳಗೆ ಕಾಮಗಾರಿ ಪೂರ್ಣಗೊಳಿಸಿ ಎಂದು ಗುತ್ತಿಗೆದಾರರಿಗೆ ಸೂಚಿಸಿದರು.

ಆದರೆ ಪರಿಹಾರದ ಆದೇಶ ಪ್ರತಿ ಪಡೆಯಲು ಒಂದೇ ಕುಟುಂಬದ ನಾಲ್ವರು ಅಣ್ಣ-ತಮ್ಮಂದಿರು ನಿರಾಕರಿಸಿದರು. ಪರಿಹಾರದ ಆದೇಶದ ಪ್ರತಿಯನ್ನು ವಾಪಸ್ ಪಡೆದು ಡಿಸಿಗೆ ನೀಡಿ, ಸಮಸ್ಯೆ ಬಗೆಹರಿಸಿ ಕಾಮಗಾರಿ ಪೂರ್ಣಗೊಳಿಸುವಂತೆ ಸಚಿವರು ಸೂಚಿಸಿದರು. ಸಂಧಾನಕ್ಕೆ ಒಪ್ಪದಿದ್ದರೆ, ಕಾನೂನು ರೀತಿ ಕ್ರಮ ಕೈಗೊಳ್ಳುವಂತೆಯೂ ಹೇಳಿದರು.

ಕನ್ನಡ ಪೋಸ್ಟ್

E-mail : kannadapostnews@gmail.com facebook.com / ಕನ್ನಡ post



# ಹಾಸನದಲ್ಲಿ ಸಂಚಾರ ನಿಯಮ ಸಂಪೂರ್ಣ ಉಲ್ಲಂಘನೆ

## ರಸ್ತೆಗಳಲ್ಲೇ ಕಾರು ಪಾರ್ಕಿಂಗ್ I ಪಾದಚಾರಿಗಳಿಗೆ ಭಾರೀ ತೊಂದರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪಾದಚಾರಿಗಳ ಸಂಚಾರಕ್ಕೆ ಅನುಕೂಲವಾಗಲಿ, ರಸ್ತೆ ಅಪಘಾತ ಕಡಿಮೆಯಾಗಲಿ ಎಂಬ ಸದುದ್ದೇಶದಿಂದ ಮಹಾನಗರ ಪಾಲಿಕೆ ನಗರದಲ್ಲಿ ರಸ್ತೆಬದಿ ಅಂಗಡಿಗಳ ತೆರವುಗೊಳಿಸಿದ್ದು ಖಾಲಿ ಜಾಗದಲ್ಲೀಗ ಕಾರುಗಳು ನಿಲುಗಡೆಯಾಗುತ್ತಿದ್ದು ಮತ್ತೊಂದು ಸಮಸ್ಯೆ ಸೃಷ್ಟಿಯಾಗಿದೆ.

ನಗರದ ಬಹುತೇಕ ರಸ್ತೆಗಳು ಕಳೆದ ಹಲವು ದಿನಗಳಿಂದ ಪಾರ್ಕಿಂಗ್ ತಾಣಗಳಾಗಿ ಮಾರ್ಪಟ್ಟಿವೆ. ಹಿಮ್ಸ್‌ಗೆ ಸಂಪರ್ಕಿಸುವ ಜಿಲ್ಲಾಧಿಕಾರಿ ಕಚೇರಿ ಪಕ್ಕದ ರಸ್ತೆ, ಬಿ.ಎಂ. ರಸ್ತೆ, ಎಂ.ಜಿ. ರಸ್ತೆ, ಶಂಕರಮಠ ರಸ್ತೆ, ಆರ್.ಸಿ.ರಸ್ತೆ, ಸಾಲಗಾಮೆ ರಸ್ತೆ ಸೇರಿ ನಗರದ ಬಹುತೇಕ ರಸ್ತೆಗಳಲ್ಲಿ ಕಾರು, ಬೈಕ್‌ಗಳದ್ದೇ ಕಾರುಬಾರು ಎನ್ನುವಂತಾಗಿದೆ.

ಸುಪ್ರೀಂ ಕೋರ್ಟ್ ನಿರ್ದೇಶನ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆ ಹಾಗೂ ಸ್ಥಳೀಯ ಪೊಲೀಸರು ಬೀದಿ ಬದಿ ಅಂಗಡಿಗಳನ್ನು ತೆರವುಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ರಸ್ತೆ ವಿಸ್ತಾರವಾಯಿತೆಂದು ಎಲ್ಲರೂ ನೆಮ್ಮದಿಯ ನಿಟ್ಟುಸಿರು ಬಿಟ್ಟಿರುವ ನಡುವೆಯೇ ಮತ್ತೊಂದು ಸಮಸ್ಯೆ ಹುಟ್ಟಿಕೊಂಡಿದೆ. ರಸ್ತೆಯುದ್ದಕ್ಕೂ ಕಾರುಗಳು ನಿಲುಗಡೆಯಾಗುತ್ತಿವೆ. ಬೆಳಿಗ್ಗೆಯಿಂದ ಸಂಜೆ ವರೆಗೆ ವಾಹನ ದಟ್ಟಣೆ ಇರುವುದರಿಂದ ನಗರದಲ್ಲಿ ಸಂಚಾರ ವ್ಯವಸ್ಥೆ ತೀರಾ ಹದಗೆಟ್ಟಿದೆ. ಹೀಗಾಗಿ ಶಾಲಾ ಕಾಲೇಜು ಮಕ್ಕಳು, ಬೈಕ್ ಸವಾರರು ಕಿರಿಕಿರಿ ಅನುಭವಿಸುತ್ತಿದ್ದಾರೆ. ರಸ್ತೆ ಬದಿ ಒಂದು ಕಾರು ನಿಂತರೆ ಅದರ ಹಿಂದೆ ವಾಹನಗಳ ಸಂಖ್ಯೆ ಸಾಲುಗಟ್ಟಿ ನಿಂತಿರುತ್ತವೆ.



### ಅಂಬುಲೆನ್ಸ್ ಸಂಚಾರಕ್ಕೂ ಅಡ್ಡಿ

ಹಿಮ್ಸ್‌ಗೆ ಹೆಚ್ಚಾಗಿ ಅಂಬುಲೆನ್ಸ್‌ಗಳು ಬರುತ್ತವೆ. ಆದರೆ ರಸ್ತೆ ಯಾವಗಲೂ ಜಾಂ ಆಗಿರುವುದರಿಂದ ಸಾವು ಬದುಕಿನ ನಡುವೆ ಹೋರಾಡುವ ರೋಗಿಗಳನ್ನು ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ತಲುಪಿಸಲು ಸಾಧ್ಯವಾಗುತ್ತಿಲ್ಲ. ಜಿಲ್ಲಾಧಿಕಾರಿ ಕಚೇರಿ ಸಮೀಪದ ರಸ್ತೆ ಯಾವಾಗಲೂ ವಾಹನಗಳಿಂದ ತುಂಬಿರುತ್ತದೆ. ಮೊದಲು ಅಲ್ಲಿ ಕ್ಯಾಂಟೀನ್‌ಗಳಿದ್ದವು. ಮಹಾನಗರ ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದ್ದರಿಂದ ರಸ್ತೆಪೂರ್ತಿ ಕಾರು ಪಾರ್ಕಿಂಗ್ ತಾಣವಾಗಿ ಮಾರ್ಪಟ್ಟಿದೆ. ಬಹುತೇಕ ಖಾಸಗಿ ನರ್ಸಿಂಗ್ ಹೋಂಗಳು ಅದೇ ರಸ್ತೆಯಲ್ಲಿರುವುದರಿಂದ ವೈದ್ಯರು, ಅಧಿಕಾರಿಗಳು ರಸ್ತೆಯಲ್ಲೇ ವಾಹನ ನಿಲ್ಲಿಸಿ ಕೆಲಸಕ್ಕೆ ಹೋಗುತ್ತಿದ್ದಾರೆ. ಇನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ ಸಮೀಪ ಆಟೋ ನಿಲ್ದಾಣವಿದ್ದು ಅದನ್ನೂ ಕಾರು ಚಾಲಕರು ಜಪ್ತಿ ಮಾಡಿಕೊಂಡಂತೆ ಮಾಡಿದ್ದಾರೆ. ಬೆಳಿಗ್ಗೆ ಆಟೋ ಚಾಲಕರು ಬರುವ ಮೊದಲೇ ಕಾರು ನಿಲ್ಲಿಸಿ ಹೋಗುತ್ತಿರುವುದರಿಂದ ಆಟೋ ನಿಲ್ಲಿಸಲು ಸ್ಥಳಾವಕಾಶ ಇಲ್ಲದಂತಾಗಿದೆ ಎಂದು ಆಟೋ ಚಾಲಕರೊಬ್ಬರು ಅಳಲು ತೋಡಿಕೊಂಡರು.

ಪ್ರತಿ ಗುರುವಾರ ಬಂತೆಂದರೆ ಎಂ.ಜಿ. ರಸ್ತೆಯ ರಾಘವೇಂದ್ರ ಸ್ವಾಮಿ ಮಠದ ಬಳಿ ಪಾದಚಾರಿಗಳು ಪ್ರಯಾಸಪಡುವಂತಾಗಿದೆ. ಬೆಳಿಗ್ಗೆಯಿಂದ 8 ರಿಂದ ಮಧ್ಯಾಹ್ನ 2 ಗಂಟೆ ವರೆಗೆ ರಸ್ತೆಯಲ್ಲೇ ವಾಹನಗಳು ನಿಂತಿರುತ್ತವೆ. ದೇವಸ್ಥಾನಕ್ಕೆ ಬರುವ ಜನರು ರಸ್ತೆಯ ಎಲ್ಲೆಂದರಲ್ಲಿ ತಮ್ಮ ವಾಹನ ಪಾರ್ಕ್ ಮಾಡುತ್ತಿದ್ದಾರೆ.

### ಕಣ್ಮುಚ್ಚಿ ಕುಳಿತ ಸಂಚಾರ ಪೊಲೀಸರು

ಶಂಕರಮಠ ರಸ್ತೆ, ಆರ್.ಸಿ.ರಸ್ತೆ ಹಾಗೂ ಎಂ.ಜಿ. ರಸ್ತೆಯಲ್ಲಿ ದ್ವಿಚಕ್ರ ವಾಹನ ಸವಾರರ ಹೆಲ್ಮೆಟ್ ತಪಾಸಣೆಯಷ್ಟೇ ಸಂಚಾರ ಪೊಲೀಸರ ಕೆಲಸ ಎಂಬಂತಾಗಿದೆ. ಕಣ್ಮುಂದೆಯೇ ಮುಖ್ಯ ರಸ್ತೆ ಬದಿಯೇ ಕಾರು ನಿಲ್ಲಿಸಿ ಹೋದರು ಪೊಲೀಸರು ಪ್ರಶ್ನಿಸುತ್ತಿಲ್ಲ. ಇನ್ನು ಯಾವ ದಿನ ಯಾವ ಬದಿಗೆ ವಾಹನ ನಿಲ್ಲಿಸಬೇಕೆಂಬ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆಯಾದರೂ ನಗರದ ಎಲ್ಲಿಯೂ ಅದು ಪಾಲನೆಯಾಗುತ್ತಿಲ್ಲ. ಹೆಲ್ಮೆಟ್ ಧರಿಸದವರಿಗೆ ದಂಡ ವಿಧಿಸುವ ಜವಾಬ್ದಾರಿಯನ್ನು ಸಂಚಾರ ಪೊಲೀಸರು ನಿಯಮ ಪಾಲನೆಗೂ ನೀಡಬೇಕೆಂಬ ಆಗ್ರಹ ಕೇಳಿಬಂದಿದೆ.

### ನಗರದ ಸೌಂದರ್ಯಕ್ಕೆ ಧಕ್ಕೆ

ಅಡ್ಡಾದಿಡ್ಡಿ ವಾಹನಗಳ ನಿಲುಗಡೆ, ಬೈಕ್ ವೀಲ್ಹಿಂಗ್, ಗುಂಡಿಬಿದ್ದ ರಸ್ತೆಗಳು ನಗರದ ಸೌಂದರ್ಯಕ್ಕೆ ಧಕ್ಕೆ ತರುತ್ತಿವೆ. ಆರ್.ಸಿ. ರಸ್ತೆಯ ಚರ್ಚ್ ಬಳಿ ಚರಂಡಿ ದುರಸ್ತಿ ಹಿನ್ನಲೆಯಲ್ಲಿ ಗುಂಡಿ ಅಗೆದು ತಿಂಗಳು ಕಳೆದರೂ ಮುಚ್ಚುವ ಕೆಲಸವಾಗಿಲ್ಲ. ಸರ್ಕಾರಿ ಆಸ್ಪತ್ರೆ, ಸರ್ಕಾರಿ ಕಚೇರಿಗಳಿಗೆ ಹೋಗುವ ಸಾರ್ವಜನಿಕರು ನಿತ್ಯ ನರಕಯಾತನೆ ಅನುಭವಿಸುತ್ತಿದ್ದಾರೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕೆಂಬ ಒತ್ತಾಯ ಸಾರ್ವಜನಿಕರದ್ದಾಗಿದೆ.

# ಗುರು-ಶಿಷ್ಯರ ಸಮ್ಮಿಲನ ಭಾವನೆಗಳ ಬೆಸುಗೆ: ಕೊಟ್ರೇಶ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರತಿಯೊಬ್ಬ ಸಾಧಕನ ಹಿಂದೆ ಗುರುವಿನ ಮಾರ್ಗದರ್ಶನವಿರುತ್ತದೆ. ಕಲಿಸಿದ ಗುರುಗಳ ಬಗ್ಗೆ ಹೃದಯಸ್ಪರ್ಶಿ ಮಾತುಗಳನ್ನಾಡುವ ಔದಾರ್ಯ ಎಲ್ಲರದ್ದಾಗಬೇಕು. ಗುರು ಶಿಷ್ಯರ ಸಮ್ಮಿಲನ ಭಾವನಾತ್ಮಕ ಸಹೃದಯಗಳ ಬೆಸುಗೆಯಾಗಿದೆ ಎಂದು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಉಪ್ಪಾರ್ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳು ನಗರದ ಗಾಂಧಿ ಭವನದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಗುರು ನುಡಿ ನಮನ, ಗೌರವ ಸನ್ಮಾನ ಸಮಾರಂಭ ಹಾಗೂ ಸಾಂಸ್ಕೃತಿಕ ಗೋಷ್ಠಿ ಉದ್ಘಾಟಿಸಿ ಮಾತನಾಡಿ, ಕೆಎಸ್‌ಒಯು ಅಂತಿಮ ವರ್ಷದ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಮೂರು ವರ್ಷಗಳ ಕಾಲ ಪರಸ್ಪರ ಒಬ್ಬರನ್ನೊಬ್ಬರು ಮುಖತಃ ಭೇಟಿಯಾಗದೇ ವಾಟ್ಸಪ್ ಮೂಲಕ ಬೆರೆತು, ಕಲಿಯುತ್ತಾ ಸಾಗಿ ಅಂತಿಮವಾಗಿ ಎಲ್ಲಾ ಸೇರಿ ತಮಗೆ ಕಲಿಸಿದ ಎಲ್ಲಾ ಗುರುಗಳ ನೇರ ದರ್ಶನ ಪಡೆಯುವ, ಸನ್ಮಾನಿಸಿ ಗೌರವಿಸುವ, ನುಡಿನಮನ ಸಲ್ಲಿಸುವ ಉದಾತ್ತ ಚಿಂತನಶೀಲ ಕಾರ್ಯಕ್ರಮ ಸ್ಮರಣೀಯ ಎಂದರು.

ವಿದ್ಯಾರ್ಥಿ ಪ್ರತಿನಿಧಿಗಳಾದ ಸಮುದ್ರವಳ್ಳಿ ವಾಸು, ಪ್ರತಿಭಾ ಸುದರ್ಶನ್, ಎ.ಯಲ್ಲಪ್ಪ, ರೂಪಾ ನೇಮಣ್ಣ, ರೇಖಾಶಂಕರ್ ಅವರುಗಳ ಪರಿಶ್ರಮ ಶ್ಲಾಘನೀಯವಾದದ್ದು. ಇವರುಗಳ ಒತ್ತಾಸೆಗೆ ನವೀನ್ ಎಸ್.ಬಿ, ರಶ್ಮಿ ರಾಮಪ್ರಸಾದ್, ರೂಪಾ ವೈ, ಹರೀಶ್ ಎಂ.ಆರ್. ಹಾಗೂ ಖಾಜಿ ಶೇಖ್ ಅವರು ಆಸರೆಯಾಗಿ ನಿಂತಿದ್ದು ಕಾರ್ಯಕ್ರಮದ ಶೋಭೆ ಹೆಚ್ಚಲು ಕಾರಣವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರಿನ ಬಾಸುದೇವ ಸೋಮಾನಿ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಟಿ. ರಮೇಶ್ ಮಾತನಾಡಿ, ಇದೊಂದು ಭಾವನಾತ್ಮಕ ಹಾಗೂ ಸ್ನೇಹಪೂರ್ವಕವಾದ ಹೃದಯ ಸ್ಪರ್ಶಿ ಕಾರ್ಯಕ್ರಮ. ಸಮಾಜಕ್ಕೆ ಸೇವೆ, ಕಾಯಕ ನಿಷ್ಠೆ, ಸತ್ಯಪರತೆ, ಸ್ವಚ್ಛತೆ ಮುಂತಾದ ಉದಾತ್ತ ಗುಣಗಳನ್ನು ಅರುಹಿದ ಮಹಾತ್ಮ ಗಾಂಧಿ ನಮ್ಮೆಲ್ಲರಿಗೂ ಆದರ್ಶ.ಇಂತಹ ಅಭೂತಪೂರ್ವ ಕಾರ್ಯಕ್ರಮವನ್ನು ಹಾಸನದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿರುವುದು ಔಚಿತ್ಯಪೂರ್ಣವಾಗಿದೆ ಎಂದು ಶ್ಲಾಘಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಮಾತನಾಡಿ, ಸಾಹಿತಿ ಹಾಗೂ ಜಿಲ್ಲಾಧ್ಯಕ್ಷ ಸಮುದ್ರವಳ್ಳಿ ವಾಸು, ಪ್ರತಿಭಾ ಸುದರ್ಶನ್ ಮತ್ತವರ ತಂಡ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಡಿ ಪದವಿ ವ್ಯಾಸಂಗ ಮಾಡುತ್ತಿರುವ ಮನಸ್ಸುಗಳನ್ನು ವಾಟ್ಸಪ್ ಬಳಗದ ಮೂಲಕ ಒಂದೆಡೆ ಸೇರಿಸಿ, ಮಾರ್ಗದರ್ಶನ ನೀಡಿ ಸಂಪೂರ್ಣ ವಿದ್ಯಾರ್ಥಿ ಬಳಗ ಸಹಕಾರ ಪಡೆದು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಬ್ಯಾನರ್ ಅಡಿ ಕಾರ್ಯಕ್ರಮ ಸಂಘಟಿಸಿರುವುದು ಮೌಲ್ಯವನ್ನು ಹೆಚ್ಚಿಸಿದೆ. ಗುರುಗಳನ್ನು ಸತ್ಕರಿಸುವ ಹಾಗೂ ಸ್ನೇಹ ಮಿಲನಕ್ಕಾಗಿ ನೂರಾರು ಕಿಲೋ ಮೀಟರ್ ದೂರದಿಂದ ವಿದ್ಯಾರ್ಥಿಗಳು ಹಾಸನಕ್ಕೆ ಆಗಮಿಸಿರುವುದು ಹೆಮ್ಮೆಯ ಸಂಗತಿ. ನಿಮ್ಮೆಲ್ಲರ ನಿಸ್ವಾರ್ಥ ಭಾವ ಎಲ್ಲರನ್ನೂ ಸೇರಿಸಿದೆ ಎಂದರು.

### ಮುಕ್ತ ಶಿಕ್ಷಣ ಚೇತನ ಪ್ರಶಸ್ತಿ ಪ್ರದಾನ

ಮೈಸೂರಿನ ಬಾಸುದೇವ ಸೋಮಾನಿ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಟಿ. ರಮೇಶ್, ಮೈಸೂರು ಕಾಲೇಜಿನ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪುಷ್ಪಲತಾ, ಹಾಸನ ಕೆ.ಎಸ್.ಒ.ಯು.ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ರವಿ ಆರ್.ಎನ್, ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ ಕಾಲೇಜಿನ ಇಂಗ್ಲೀಷ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಮನು ರಾಘವೇಂದ್ರ, ಬಂಕಾಪುರ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಜಿ.ಇ. ಬಲರಾಮೇಗೌಡ ಸೇರಿ ಹಲವು ಗಣ್ಯರು ಮಾತನಾಡಿದರು.

ಮೈಸೂರು ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಸಿಂಧು ಎನ್.ಆರ್, ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಮಂಜುಳಾ ಎಸ್., ಮೈಸೂರು ಕಾಲೇಜಿನ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಮಾರುತಿ ಪ್ರಸನ್ನ ಬಿ.ಎನ್, ನಂಜನಗೂಡು ಭೂಗೋಳ ಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಮಹೇಶ್ ಬಿ, ಚಾಮರಾಜನಗರದ ಕನ್ನಡ ವಿಭಾಗದ ಉಪನ್ಯಾಸಕ ಸುರೇಶ್ ಆರ್.ಎಸ್, ಮೈಸೂರಿನ ಇತಿಹಾಸ ಉಪನ್ಯಾಸಕಿ ಅಶ್ವಿನಿ ವಿ, ಮೈಸೂರಿನ ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಮಣಿ ಎನ್, ಅರಸೀಕೆರೆಯ ಕನ್ನಡ ವಿಭಾಗದ ಸಹಾಯಕ ಉಪನ್ಯಾಸಕಿ ಪದ್ಮ ಎ.ಆರ್. ಅವರುಗಳಿಗೆ ಮುಕ್ತ ಶಿಕ್ಷಣ ಚೇತನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

# ಕಕ್ಷಿದಾರರಿಗೆ ತ್ವರತಿಗತಿಯಲ್ಲಿ ನ್ಯಾಯ: ಹುಲುಮನಿ ತಿಮ್ಮಣ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಜನಸಾಮಾನ್ಯರಿಗೆ ತ್ವರತಗತಿಯಲ್ಲಿ ನ್ಯಾಯ ಒದಗಿಸಬೇಕು ಎಂಬ ಮೂಲ ಉದ್ದೇಶದಿಂದ ಆಲೂರಿನಲ್ಲಿ ಉಪ ವಿಭಾಗಾಧಿಕಾರಿ ನ್ಯಾಯಾಲಯ ಸ್ಥಾಪಿಸಲಾಗಿದೆ ಎಂದು ಉಪ ವಿಭಾಗಾಧಿಕಾರಿ ಹುಲುಮನಿ ತಿಮ್ಮಣ್ಣ ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧದಲ್ಲಿ ನೂತನ ಉಪ ವಿಭಾಗಾಧಿಕಾರಿ ನ್ಯಾಯಾಲಯ ಉದ್ಘಾಟನೆ ನೆರವೇರಿಸಿ ಮಾತನಾಡಿ, ತಾಲ್ಲೂಕು ಹಾಸನ ಮತ್ತು ಕೊಡಗು ಜಿಲ್ಲೆ ಗಡಿವರೆಗೆ ತನ್ನ ವ್ಯಾಪ್ತಿ ಹೊಂದಿದೆ. ನ್ಯಾಯ ಅರಸಿ ಬರುವ ಕಕ್ಷಿದಾರರು ಆಲೂರು ತಾಲ್ಲೂಕಿನಿಂದ ಸಕಲೇಶಪುರಕ್ಕೆ ಬಂದು ಹೋಗಲು ಸಮಯ ವ್ಯರ್ಥವಾಗುತ್ತಿತ್ತು. ಕಕ್ಷಿದಾರರ ಸಂಕಷ್ಟ ಅರಿಯಲಾಗಿದ್ದು, ತ್ವರಿತಗತಿಯಲ್ಲಿ ನ್ಯಾಯ ಒದಗಿಸಬೇಕು ಎಂಬ ಉದ್ದೇಶದಿಂದ ಪ್ರತಿ ಮಂಗಳವಾರ ಆಲೂರು ಮಿನಿ ವಿಧಾನಸೌಧದಲ್ಲಿ ನ್ಯಾಯಾಲಯ ನಡೆಯಲಿದೆ.




ಸಕಲೇಶಪುರ ಉಪ ವಿಭಾಗಾಧಿಕಾರಿ ಈಗಾಗಲೇ ಸಕಲೇಶಪುರ, ಬೇಲೂರು, ಅರಕಲಗೂಡು ತಾಲ್ಲೂಕುಗಳಲ್ಲಿ ನ್ಯಾಯಾಲಯ ನಡೆಸುತ್ತಿದ್ದಾರೆ. ಆಲೂರಿನಲ್ಲಿ ಪ್ರಾರಂಭ ಮಾಡಿರುವುದರಿಂದ ಕಕ್ಷಿದಾರರಿಗೆ ಅನುಕೂಲವಾಗಲಿದೆ ಎಂದರು.

ತಹಸೀಲ್ದಾರ್ ಎಚ್. ಮಲ್ಲಿಕಾರ್ಜುನ ಮಾತನಾಡಿ, ಮೇಲಾಧಿಕಾರಿಗಳು ವಾರಕ್ಕೊಮ್ಮೆ ತಾಲ್ಲೂಕು ಕಚೇರಿಗೆ ಬಂದು ಹೋಗುವುದರಿಂದ, ಕಚೇರಿ ಸಿಬ್ಬಂದಿಗಳು ಸಹ ಸಾರ್ವಜನಿಕರ ಕೆಲಸಗಳನ್ನು ಪೂರೈಸಲು ಹೆಚ್ಚು ಒತ್ತು ನೀಡುತ್ತಾರೆ ಎಂಬ ಆತ್ಮ ವಿಶ್ವಾಸವಿದೆ ಎಂದರು.

ಸಕಲೇಶಪುರ ತಹಸೀಲ್ದಾರ್ ಸುಪ್ರೀತ, ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಎಂ.ಎಸ್. ಮಹೇಶ್ ಮಾತನಾಡಿದರು. ಕಾರ್ಯದರ್ಶಿ ಆರ್.ಬಿ. ಸುರೇಶ್, ತಾಲ್ಲೂಕು ವಕೀಲರ ಸಂಘದ ಎಲ್ಲ ಸದಸ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ಸಕಾಲಕ್ಕೆ ಸಿಗದ ಚಿಕಿತ್ಸೆಯಿಂದ ವ್ಯಕ್ತಿ ಸಾವು: ಆರೋಪ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಅನಾರೋಗ್ಯದಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಅಂಬುಲೆನ್ಸ್ ಚಾಲಕನ ನಿರ್ಲಕ್ಷ್ಯವೇ ಜೀವ ಹೋಗಲು ಕಾರಣ ಎಂದು ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಮೃತನ ಕುಟುಂಬಸ್ಥರು ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದಲ್ಲದೇ ಕರೆದೋಯ್ಯುತ್ತಿದ್ದ 108 ಆಂಬುಲೆನ್ಸ್‌ನ ಮುಂಭಾಗದ ಗಾಜು ಒಡೆದು ಆಕ್ರೋಶ ವ್ಯಕ್ತಪಡಿಸಿದರು. ತಾಲೂಕಿನ ಹೊಂಡರವಳ್ಳಿ ಗ್ರಾಮದ ನಿವಾಸಿ ರೇವಣ್ಣ ಅವರನ್ನು ಕುಟುಂಬಸ್ಥರು ಅರಕಲಗೂಡು ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆತಂದಿದ್ದರು. ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ ಬಳಿಕ ಹೆಚ್ಚಿನ ಚಿಕಿತ್ಸೆಗೆ ಹಾಸನ ಆಸ್ಪತ್ರೆಗೆ 108 ಅಂಬುಲೆನ್ಸ್‌ನಲ್ಲಿ ಕರೆದೊಯ್ಯಲಾಗುತ್ತಿತ್ತು. ಈ ವೇಳೆ ಮಾರ್ಗಮಧ್ಯೆ ರೇವಣ್ಣ ಮೃತಪಟ್ಟಿದ್ದಾರೆಂದು ತಿಳಿದುಬಂದಿದೆ.

ಅದರಿಂದ ಆಕ್ರೋಶಗೊಂಡ ಕುಟುಂಬಸ್ಥರು ಅಂಬುಲೆನ್ಸ್ ಸಿಬ್ಬಂದಿಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿ, ಗಾಜು ಒಡೆದು ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ರೇವಣ್ಣ ಅವರ ಸಾವಿಗೆ ಅಂಬುಲೆನ್ಸ್ ಸಿಬ್ಬಂದಿಯ ನಿರ್ಲಕ್ಷ್ಯವೇ ಕಾರಣವೇ ಎಂಬ ಆರೋಪ ಕೇಳಿಬಂದಿದ್ದು, ಈ ಕುರಿತು ಸಮಗ್ರ ತನಿಖೆ ನಡೆಯಬೇಕಿದೆ. ಘಟನೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳು ಸತ್ಯಾಸತ್ಯತೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕುಟುಂಬಸ್ಥರು ಒತ್ತಾಯಿಸಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ಆಗಸ್ಟ್-27

1783: ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಜಾಕ್ ಶಾರ್ಲ್ ಮೊದಲ ಬಾರಿಗೆ ಹೈಡ್ರೋಜನ್ ತುಂಬಿದ ಬಲೂನ್ ಹಾರಿಸಿದರು.

1947: ಭಾರತದ ಸಂವಿಧಾನ ರಚನಾ ಸಭೆಯ ಕರಡು ಸಮಿತಿಯ ಕಾರ್ಯಕ್ಕೆ ಸಂಬಂಧಿಸಿದ ಮಹತ್ವದ ಚರ್ಚೆಗಳು ನಡೆಯುತ್ತಿದ್ದ ಕಾಲಘಟ್ಟ.

1955: ಗಿನ್ನೆಸ್ ವಿಶ್ವ ದಾಖಲೆಗಳ ಮೊದಲ ಆವೃತ್ತಿ ಪ್ರಕಟವಾಯಿತು.

**ಜನನ**

1910: ಮದರ್ ತೆರೇಸಾ

1908: ಭಾರತೀಯ ಕ್ರಿಕೆಟ್‌ನ ದಿಗ್ಗಜ ಸರ್ ಡೊನಾಲ್ಡ್ ಬ್ರಾಡ್‌ಮನ್

**ಮರಣ**

1848: ಜಾರ್ಜ್ ಸ್ಟೀಫನ್ಸನ್, ಆವಿಯ ರೈಲು ಎಂಜಿನ್ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಬ್ರಿಟಿಷ್ ಎಂಜಿನಿಯರ್

# ಮಲೆನಾಡಿನ ಜನರ ಗೋಳಿಗೆ ಸರ್ಕಾರ ಸ್ಪಂದಿಸಲಿ



ವಿ. ಇಂಚರ ವಳಲಹಳ್ಳಿ,
ಪತ್ರಿಕೋದ್ಯಮ ವಿದ್ಯಾರ್ಥಿನಿ

ಮಲೆನಾಡು ಎಂದರೆ ಕೇವಲ ಹಸಿರು, ಬೆಟ್ಟ-ಗುಡ್ಡಗಳು ಹಾಗೂ ಪ್ರವಾಸಿ ತಾಣಗಳಲ್ಲ. ಸಾವಿರಾರು ಕುಟುಂಬಗಳ ಬದುಕಿಗೆ ಆಧಾರವಾಗಿರುವ ಕೃಷಿ ಪ್ರದೇಶವೂ ಹೌದು. ಆದರೆ ಹಲವು ವರ್ಷಗಳಿಂದ ಇಲ್ಲಿನ ಜನರು ಕೃಷಿ, ಅರಣ್ಯ, ನೀರಾವರಿ, ಕಾಡಾನೆ ಹಾವಳಿ, ಭೂಮಿ ಹಾಗೂ ಮೂಲಸೌಕರ್ಯ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ವಿಶೇಷ ಗಮನ ಹರಿಸುವ ಅಗತ್ಯವಿದೆ.

ಮಲೆನಾಡಿನಲ್ಲಿ ಅತಿಯಾದ ಮಳೆಯಿಂದ ಕಾಫಿ, ಮೆಣಸು ಸೇರಿದಂತೆ ವಿವಿಧ ಬೆಳೆಗಳಿಗೆ ಕೊಳೆರೋಗ ಹಾಗೂ ಇತರ ಹಾನಿಗಳು ಉಂಟಾಗುತ್ತಿವೆ. ಮತ್ತೊಂದೆಡೆ, ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ಬೆಳೆಗಳನ್ನು ಉಳಿಸಿಕೊಳ್ಳುವುದು ರೈತರಿಗೆ ಸವಾಲಾಗಿದೆ. ಮಳೆನೀರು ಸಂಗ್ರಹಿಸಲು ಅಗತ್ಯವಾದ ಕೆರೆ-ಕಟ್ಟೆಗಳು ಹಾಗೂ ಸಣ್ಣ ನೀರಾವರಿ ವ್ಯವಸ್ಥೆಗಳ ಕೊರತೆಯೂ ರೈತರ ಸಂಕಷ್ಟವನ್ನು ಹೆಚ್ಚಿಸಿದೆ.

ಸಣ್ಣ ಹಾಗೂ ಅತಿಸಣ್ಣ ಕಾಫಿ ಬೆಳೆಗಾರರಿಗೆ ಸರ್ಕಾರದಿಂದ ದೊರೆಯಬೇಕಾದ ಸೌಲಭ್ಯಗಳು ಸಮರ್ಪಕವಾಗಿ ತಲುಪುತ್ತಿಲ್ಲ. ಸಣ್ಣ ಹಿಡುವಳಿದಾರರು ಅಗತ್ಯ ಪ್ರಮಾಣ ಪತ್ರಗಳನ್ನು ಪಡೆಯುವುದರಲ್ಲಿಯೂ ತೊಂದರೆ ಎದುರಿಸುತ್ತಿದ್ದಾರೆ. ಸರ್ಕಾರಿ ಭೂಮಿಯಲ್ಲಿ 5053ನೇ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ಹಲವು ವರ್ಷಗಳಿಂದ ಮಂಜೂರಾತಿಗಾಗಿ ಕಾಯುತ್ತಿರುವ ಕುಟುಂಬಗಳ ಸಮಸ್ಯೆಯನ್ನೂ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಿದೆ.

### ಹಕ್ಕುಪತ್ರಕ್ಕಾಗಿ ವರ್ಷಗಳ ಕಾಯುವಿಕೆ

ಮಲೆನಾಡಿನ ಹಲವು ಗ್ರಾಮಗಳಲ್ಲಿ ಭೂಮಿಯ ಹಕ್ಕುಪತ್ರದ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಕೆಲವು ಗ್ರಾಮಗಳಲ್ಲಿ 94ಸಿ ಅಡಿಯಲ್ಲಿ ಅರ್ಜಿ ಸಲ್ಲಿಸಿರುವ ಕುಟುಂಬಗಳಿಗೆ ಹಕ್ಕುಪತ್ರ ವಿತರಣೆಯಾಗದೆ ವರ್ಷಗಳಿಂದ ಕಾಯುವಂತಾಗಿದೆ. ಅರಣ್ಯ ಇಲಾಖೆಗೆ ಸಂಬಂಧಿಸಿದ ಆಕ್ಷೇಪಣೆಗಳು ಹಾಗೂ ಎಚ್‌ಆರ್‌ಪಿ ವ್ಯಾಪ್ತಿಗೆ ಸಂಬಂಧಿಸಿದ ಕಡತಗಳು ಬಾಕಿ ಇರುವುದರಿಂದ ಹಕ್ಕುಪತ್ರ ವಿತರಣೆಯ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂಬುದು ಗ್ರಾಮಸ್ಥರ ಅಳಲು.

ಕಸ್ತೂರಿ ರಂಗನ್ ವರದಿ ಹಾಗೂ ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದ ನಿಯಮಗಳ ಕಾರಣದಿಂದಲೂ ಕೆಲವು ಪ್ರಕರಣಗಳಲ್ಲಿ ಭೂಮಿ ಸಂಬಂಧಿತ ಸಮಸ್ಯೆಗಳು ಮತ್ತಷ್ಟು ಸಂಕೀರ್ಣಗೊಂಡಿವೆ. ಪರಿಸರ ಹಾಗೂ ಅರಣ್ಯ ಸಂರಕ್ಷಣೆ ಅತ್ಯಂತ ಅಗತ್ಯವಾದರೂ, ಹಲವು ವರ್ಷಗಳಿಂದ ಮಲೆನಾಡಿನಲ್ಲಿ ವಾಸಿಸುತ್ತಿರುವ ಸ್ಥಳೀಯರ ಜೀವನೋಪಾಯ ಹಾಗೂ ವಾಸ್ತವ ಪರಿಸ್ಥಿತಿಯನ್ನೂ ಪರಿಗಣಿಸಬೇಕಾಗಿದೆ.

94ಸಿ ಅಡಿಯಲ್ಲಿ ಅರ್ಜಿ ಸಲ್ಲಿಸಿರುವ ಅರ್ಹ ಕುಟುಂಬಗಳ ಪ್ರಕರಣಗಳನ್ನು ಸಂಬಂಧಪಟ್ಟ ಇಲಾಖೆಗಳು ಸಮಗ್ರವಾಗಿ ಪರಿಶೀಲಿಸಿ, ಕಾನೂನುಬದ್ಧವಾಗಿ ಹಕ್ಕುಪತ್ರ ನೀಡಲು ಕ್ರಮ ಕೈಗೊಳ್ಳಬೇಕು. ಅರಣ್ಯ, ಕಂದಾಯ ಹಾಗೂ ಸಂಬಂಧಪಟ್ಟ ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ ಬಾಕಿ ಇರುವ ಕಡತಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕಿದೆ. ಭೂಮಿಯ ಹಕ್ಕುಪತ್ರ ಎನ್ನುವುದು ಕೇವಲ ದಾಖಲೆ ಮಾತ್ರವಲ್ಲ; ಅದು ಕುಟುಂಬಗಳ ಬದುಕಿನ ಭದ್ರತೆ ಹಾಗೂ ಭವಿಷ್ಯಕ್ಕೆ ಸಂಬಂಧಿಸಿದ ವಿಚಾರವಾಗಿದೆ.

### ಕಾಡಾನೆ ಹಾವಳಿ ತಡೆಗೆ ಶಾಶ್ವತ ಪರಿಹಾರ ಬೇಕು

ಮಲೆನಾಡಿನ ಹಲವು ಗ್ರಾಮಗಳಲ್ಲಿ ಕಾಡಾನೆಗಳು ಮನೆಗಳ ಬಳಿಗೆ ಬರುತ್ತಿರುವುದು ಜನರಲ್ಲಿ ಆತಂಕ ಮೂಡಿಸಿದೆ. ತೋಟಗಳಲ್ಲಿ ಕಾಡುಕೋಣಗಳ ಹಾವಳಿಯಿಂದಲೂ ಬೆಳೆ ನಷ್ಟವಾಗುತ್ತಿದೆ. ಜನರ ಸುರಕ್ಷತೆ ಹಾಗೂ ಕೃಷಿ ರಕ್ಷಣೆಗೆ ಅರಣ್ಯಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾಗಿದೆ.

ಹೇಮಾವತಿ ಜಲಾಶಯ ಹಾಗೂ ಮುಳುಗಡೆ ಪ್ರದೇಶಗಳ ಸಂತ್ರಸ್ತರ ಸಮಸ್ಯೆಗಳೂ ಇನ್ನೂ ಸಂಪೂರ್ಣವಾಗಿ ಬಗೆಹರಿದಿಲ್ಲ. ಅರಣ್ಯ ಸಂಬಂಧಿತ ನಿಯಮಗಳು ಹಾಗೂ ಇಲಾಖೆಯ ನಿರ್ಬಂಧಗಳಿಂದ ಗ್ರಾಮೀಣ ಜನರು ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ನಿಯಮಗಳನ್ನು ಜಾರಿಗೊಳಿಸುವಾಗ ಪರಿಸರ ಸಂರಕ್ಷಣೆಯ ಜತೆಗೆ ಸ್ಥಳೀಯ ಜನರ ಜೀವನೋಪಾಯ ಹಾಗೂ ವಾಸ್ತವ ಪರಿಸ್ಥಿತಿಯನ್ನೂ ಪರಿಗಣಿಸಬೇಕು.

### ಮಳೆ ನೀರು ಸಂಗ್ರಹಕ್ಕೆ ಸಮಗ್ರ ಯೋಜನೆ

ಮಲೆನಾಡಿನಲ್ಲಿ ಪ್ರತಿವರ್ಷ ಅಪಾರ ಪ್ರಮಾಣದ ಮಳೆ ಸುರಿಯುತ್ತದೆ. ಆದರೆ ಮಳೆನೀರಿನ ಬಹುಪಾಲು ಸಮರ್ಪಕವಾಗಿ ಸಂಗ್ರಹವಾಗದೆ ಹೊರಭಾಗಕ್ಕೆ ಹರಿದುಹೋಗುತ್ತದೆ. ಈ ನೀರನ್ನು ಸ್ಥಳೀಯವಾಗಿಯೇ ಸಂಗ್ರಹಿಸಿ ಕೃಷಿ ಹಾಗೂ ಕುಡಿಯುವ ನೀರಿನ ಅಗತ್ಯಗಳಿಗೆ ಬಳಸುವ ಸಮಗ್ರ ಯೋಜನೆಯನ್ನು ಸರ್ಕಾರ ರೂಪಿಸಬೇಕು.



ಕೆರೆ-ಕಟ್ಟೆಗಳ ಅಭಿವೃದ್ಧಿ, ಸಣ್ಣ ನೀರಾವರಿ ಯೋಜನೆಗಳು, ಮಳೆನೀರು ಕೊಯ್ಲು ಹಾಗೂ ನೀರಿನ ಸಂರಕ್ಷಣೆಗೆ ಆದ್ಯತೆ ನೀಡಿದರೆ ಬೇಸಿಗೆಯ ನೀರಿನ ಸಮಸ್ಯೆಯನ್ನು ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಬಹುದು. ಇದರ ಜತೆಗೆ ಗ್ರಾಮೀಣ ರಸ್ತೆಗಳು, ಸೇತುವೆಗಳು ಹಾಗೂ ಇತರ ಮೂಲಸೌಕರ್ಯಗಳ ಅಭಿವೃದ್ಧಿಗೂ ಆದ್ಯತೆ ನೀಡಬೇಕಿದೆ.

ಕೆಲವು ಗ್ರಾಮಗಳಲ್ಲಿ ಎಸ್‌ಸಿ/ಎಸ್‌ಟಿ ಅನುದಾನದಡಿ ಮಂಜೂರಾಗಬೇಕಿದ್ದ ರಸ್ತೆ ಕಾಮಗಾರಿಗಳು ಇನ್ನೂ ಪೂರ್ಣಗೊಂಡಿಲ್ಲ ಎಂಬ ಆರೋಪಗಳಿವೆ. ಸಂಬಂಧಪಟ್ಟ ಇಲಾಖೆಗಳು ಈ ಕುರಿತು ಪರಿಶೀಲನೆ ನಡೆಸಿ ಬಾಕಿ ಇರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು.

### ಪ್ರವಾಸೋದ್ಯಮದ ಜತೆಗೆ ಸ್ಥಳೀಯರ ಸುರಕ್ಷತೆ

ಇತ್ತೀಚಿನ ವರ್ಷಗಳಲ್ಲಿ ಮಲೆನಾಡಿನ ಪ್ರವಾಸಿ ತಾಣಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಪ್ರವಾಸೋದ್ಯಮದ ಬೆಳವಣಿಗೆ ಸ್ಥಳೀಯ ಆರ್ಥಿಕತೆಗೆ ಪೂರಕವಾಗಿದ್ದರೂ, ಗ್ರಾಮೀಣ ರಸ್ತೆಗಳಲ್ಲಿ ವಾಹನಗಳ ವೇಗದ ಸಂಚಾರದಿಂದ ಸ್ಥಳೀಯರು ಹಾಗೂ ಶಾಲಾ ಮಕ್ಕಳ ಸುರಕ್ಷತೆ ಕುರಿತು ಆತಂಕವೂ ವ್ಯಕ್ತವಾಗುತ್ತಿದೆ. ಪ್ರವಾಸೋದ್ಯಮದ ಅಭಿವೃದ್ಧಿಯ ಜತೆಗೆ ಸ್ಥಳೀಯರ ಸುರಕ್ಷತೆಗೂ ಆದ್ಯತೆ ನೀಡಬೇಕಾಗಿದೆ.

ಮಲೆನಾಡು ಕೇವಲ ಪ್ರವಾಸಿ ತಾಣವಲ್ಲ; ಸಾವಿರಾರು ಕುಟುಂಬಗಳ ಬದುಕಿನ ನೆಲೆಯಾಗಿದೆ.

ಕಾಫಿ, ಮೆಣಸು ಹಾಗೂ ಇತರ ಕೃಷಿ ಬೆಳೆಗಳನ್ನು ಅವಲಂಬಿಸಿರುವ ರೈತರ ಸಮಸ್ಯೆಗಳಿಗೆ ಪರಿಹಾರ, ನೀರಿನ ಸಂರಕ್ಷಣೆ, ಅರಣ್ಯಮಾನವ ಸಂಘರ್ಷ ನಿಯಂತ್ರಣ, ರಸ್ತೆ ಅಭಿವೃದ್ಧಿ ಹಾಗೂ ಭೂಮಿ ಸಂಬಂಧಿತ ಸಮಸ್ಯೆಗಳ ನಿವಾರಣೆಗೆ ಸರ್ಕಾರ ವಿಶೇಷ ಮಲೆನಾಡು ಅಭಿವೃದ್ಧಿ ಯೋಜನೆ ರೂಪಿಸುವ ಅಗತ್ಯವಿದೆ.

ಮಲೆನಾಡಿನ ಜನರ ಸಮಸ್ಯೆಗಳನ್ನು ಕೇವಲ ಚುನಾವಣಾ ಸಂದರ್ಭದಲ್ಲಿ ನೆನಪಿಸಿಕೊಳ್ಳದೆ, ಅವರ ಬದುಕಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ತಕ್ಷಣ ಕ್ರಮ ಕೈಗೊಳ್ಳಬೇಕು. ಮಲೆನಾಡಿನ ಪರಿಸರ ಸಂರಕ್ಷಣೆಯ ಜತೆಗೆ ಇಲ್ಲಿನ ಜನರ ಬದುಕು, ಹಕ್ಕು ಹಾಗೂ ಜೀವನೋಪಾಯವನ್ನೂ ರಕ್ಷಿಸುವ ಸಮತೋಲಿತ ಅಭಿವೃದ್ಧಿ ನೀತಿ ರೂಪಿಸಬೇಕಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248